## ನಿಮ್ಮೊಡನೆ

# ಜನ ಸೇವೆಯ ಬದಲು ನಿರಂತರ ದಬ್ಬಾಳಿಕೆ ಜನಪ್ರತಿನಿಧಿ-ಅಧಿಕಾರಿಗಳಿಗೆ ಬೇಕಿದೆ ಚಿಕಿತ್ಸೆ

**ಜನಪ್ರತಿನಿಧಿಗಳು ಹಾಗೂ ಸರ್ಕಾರಿ ಅಧಿಕಾರಿಗಳು ಇರುವುದು ಜನರ ಸೇವೆಗೇ ಹೊರತು, ದಬ್ಬಾಳಿಕೆ ನಡೆಸಲಲ್ಲ. ಕನಿಷ್ಠ ಲಜ್ಜೆಯನ್ನೂ ಕಳೆದುಕೊಂಡಂತೆ ವರ್ತಿಸುವ ಅಧಿಕಾರಿಗಳು ಮತ್ತು ರಾಜಕಾರಣಿಗಳು ತಾವು ಅನುಭವಿಸುತ್ತಿರುವ ಸವಲತ್ತುಗಳ ಹಿಂದೆ ಜನಸಾಮಾನ್ಯರ ತೆರಿಗೆಯ ಹಣವಿರುವುದನ್ನು ಮರೆಯಬಾರದು.**




ಸರ್ಕಾರಿ ಆಸ್ಪತ್ರೆಗಳ ಸಂವೇದನಾರಾಹಿತ್ಯಕ್ಕೆ ತುಮಕೂರಿನಲ್ಲಿ ನಡೆದಿರುವ ತಾಯಿ–ಮಕ್ಕಳ ಸಾವಿನ ದುರ್ಘಟನೆ ಹೊಸ ಉದಾಹರಣೆಯಾಗಿದೆ. ಹೆರಿಗೆ ನೋವಿನಿಂದ ಬಳಲುತ್ತಿದ್ದ ಅಸಹಾಯಕ ಮಹಿಳೆಯನ್ನು ‘ತಾಯಿ ಕಾರ್ಡ್’ ಮತ್ತು ‘ಆಧಾರ್ ಕಾರ್ಡ್’ ಇಲ್ಲ ಎನ್ನುವ ಕಾರಣಕ್ಕೆ ಆಸ್ಪತ್ರೆಗೆ ದಾಖಲಿಸಿಕೊಳ್ಳಲು ಆಸ್ಪತ್ರೆಯ ಸಿಬ್ಬಂದಿ ನಿರಾಕರಿಸಿದ್ದಾರೆ. ಸಕಾಲಕ್ಕೆ ಚಿಕಿತ್ಸೆ ಸಿಗದೆ, ಮನೆಯಲ್ಲಿಯೇ ಹೆರಿಗೆಯಾಗಿದೆ. ಪ್ರಸವದ ಸಂದರ್ಭದಲ್ಲಾದ ಅತಿ ರಕ್ತಸ್ರಾವದಿಂದಾಗಿ ನತದೃಷ್ಟ ಮಹಿಳೆ ಹಾಗೂ ಅವಳಿ ಶಿಶುಗಳು ಮರಣಹೊಂದಿವೆ. ಅಮ್ಮನನ್ನು ಕಳೆದುಕೊಂಡ ಆರು ವರ್ಷದ ಮಗಳು ಈಗ ಒಂಟಿಯಾಗಿದ್ದಾಳೆ, ಅನಾಥೆಯಾಗಿದ್ದಾಳೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವೈದ್ಯೆ ಹಾಗೂ ಮೂವರು ನರ್ಸ್‌ಗಳನ್ನು ಕರ್ತವ್ಯಲೋಪದ ಆರೋಪದ ಮೇರೆಗೆ ಅಮಾನತುಗೊಳಿಸಲಾಗಿದೆ. ಇದು ಕರ್ತವ್ಯಲೋಪದ ಪ್ರಕರಣ ಮಾತ್ರವಲ್ಲ; ಗರ್ಭಿಣಿಗೆ ಚಿಕಿತ್ಸೆ ನೀಡಲು ನಿರಾಕರಿಸಿರುವ ಸಿಬ್ಬಂದಿಯ ನಡವಳಿಕೆ ಅಮಾನವೀಯವಾದುದು ಹಾಗೂ ಯಾವುದೇ ಸಂದರ್ಭದಲ್ಲೂ ಶುಶ್ರೂಷೆಗೆ ಹಿಂದೆಗೆಯಬಾರದೆನ್ನುವ ವೈದ್ಯಕೀಯ ವೃತ್ತಿಯ ಮೂಲಭೂತ ಆಶಯಕ್ಕೆ ವಿರುದ್ಧವಾದುದು. ಚಿಕಿತ್ಸೆಯ ಅಗತ್ಯವಿರುವವರಿಗೆ ಶುಶ್ರೂಷೆ ಒದಗಿಸುವುದು ತಕ್ಷಣದ ಆದ್ಯತೆಯಾಗಬೇಕೇ ಹೊರತು, ತಾಂತ್ರಿಕ ಸಂಗತಿಗಳಲ್ಲ ಎನ್ನುವುದನ್ನು ಹೇಳುವುದಕ್ಕೆ ಹೆಚ್ಚಿನ ತಿಳಿವಳಿಕೆಯೇನೂ ಅಗತ್ಯವಿಲ್ಲ. ಜೀವವೇ ಸಂಕಷ್ಟದಲ್ಲಿರುವಾಗ ತಾಂತ್ರಿಕ ಸಂಗತಿಗಳ ಬಗ್ಗೆ ಯೋಚಿಸುವವರು ವೈದ್ಯಕೀಯ ವೃತ್ತಿಯಲ್ಲಿರಲು ಅರ್ಹರಲ್ಲ. ತಾಯಿ ಹಾಗೂ ಕಂದಮ್ಮಗಳ ಸಾವಿಗೆ ಕಾರಣರಾದ ವೈದ್ಯಕೀಯ ಸಿಬ್ಬಂದಿಯನ್ನು ಕಠಿಣ ಕಾನೂನುಕ್ರಮಕ್ಕೆ ಒಳಪಡಿಸುವುದರ ಜೊತೆಗೆ, ಉಳಿದಿರುವ ಮಗುವಿಗೆ ತಪ್ಪಿತಸ್ಥರಿಂದ ಪರಿಹಾರ ಕೊಡಿಸುವುದರ ಬಗ್ಗೆಯೂ ಸರ್ಕಾರ ಪ್ರಯತ್ನಿಸಬೇಕು.

ವೈದ್ಯಕೀಯ ಕ್ಷೇತ್ರ ಸೇವಾ ಮನೋಭಾವ ಮರೆತು, ಸುಲಿಗೆಯ ರೂಪ ತಾಳಿರುವುದಕ್ಕೆ ನಿದರ್ಶನ ಎನ್ನುವ ಪ್ರಕರಣಗಳು ಆಗಾಗ ವರದಿಯಾಗುತ್ತಲೇ ಇರುತ್ತವೆ. ಕೊರೊನಾ ಸಂದರ್ಭದಲ್ಲಂತೂ ಜೀವರಕ್ಷಕ ಔಷಧಿಗಳು ಕಾಳಸಂತೆಯಲ್ಲಿ ಬಿಕರಿಯಾಗಿದ್ದವು. ಆಸ್ಪತ್ರೆಗಳು ಪಂಚತಾರಾ ಹೋಟೆಲ್ ಸ್ವರೂಪ ಪಡೆದುಕೊಂಡಿದ್ದವು. ಆಮ್ಲಜನಕದ ಸರಬರಾಜಿನಲ್ಲೂ ತಾರತಮ್ಯ ಎಸಗಲಾಗಿತ್ತು. ಶ್ರೀಮಂತರಾದರೆ, ಆರೋಗ್ಯಸೇವೆಗಳನ್ನು ಖರೀದಿಸುತ್ತಾರೆ. ಬಡವರು ಸರ್ಕಾರಿ ಆಸ್ಪತ್ರೆಗಳಿಗೆ ಅಲೆದು, ಮತ್ತಷ್ಟು ಬಸವಳಿಯುತ್ತಾರೆ. ನಮ್ಮ ಸರ್ಕಾರಿ ಆಸ್ಪತ್ರೆಗಳು ಮಾನವೀಯ ಸ್ಪಂದನಗಳನ್ನು ಕಳೆದುಕೊಂಡು, ಅಮಾನವೀಯ ಸ್ಥಾವರಗಳಾಗಿ ಬದಲಾಗಿವೆ. ಲಂಚ ನೀಡಲಾಗದ ಅಥವಾ ಶಿಫಾರಸಿನ ಬೆಂಬಲವಿಲ್ಲದ ರೋಗಿಗಳು ಸರ್ಕಾರಿ ಆಸ್ಪತ್ರೆಗಳ ಸಿಬ್ಬಂದಿಗೆ ಮನುಷ್ಯರಂತೆ ಕಾಣಿಸುವುದು ಅಪರೂಪ. ಸರ್ಕಾರಿ ವೈದ್ಯಕೀಯ ವ್ಯವಸ್ಥೆ ತುರ್ತು ನಿಗಾಘಟಕ ಸೇರಿಕೊಂಡಂತಿದೆ. ಆ ವ್ಯವಸ್ಥೆಗೆ ತುರ್ತು ಚಿಕಿತ್ಸೆ ನೀಡುವ ಮೂಲಕ ಹೃದಯ ಮತ್ತು ಮೆದುಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುವಂತಾಗಲು ಸದ್ಯದ ರಾಜಕೀಯ ವ್ಯವಸ್ಥೆಯಲ್ಲಿ ಪವಾಡವೇ ನಡೆಯಬೇಕೇನೊ?

ತುಮಕೂರಿನ ಘಟನೆಗೆ ಸಂಬಂಧಿಸಿದಂತೆ ತಪ್ಪಿತಸ್ಥರಿಗೆ ಶಿಕ್ಷೆಯಾದರೆ ಸಾಲದು. ಈ ದುರಂತ, ಆಡಳಿತ ವ್ಯವಸ್ಥೆಯಲ್ಲಿ ಮಾನವೀಯ ಸ್ಪಂದನಗಳನ್ನು ಮೂಡಿಸಲು ಪ್ರೇರಣೆಯಾಗಬೇಕು. ಈ ಘಟನೆಯ ಜೊತೆಗೆ, ಮಂಡ್ಯದಿಂದ ವರದಿಯಾಗಿರುವ, ಹೆಲ್ಮೆಟ್ ಧರಿಸದ ಕಾರಣಕ್ಕೆ ತಾಯಿ ಹಾಗೂ ಕಾಯಿಲೆಯಿಂದ ಬಳಲುತ್ತಿದ್ದ ಮಗುವನ್ನು ಮಳೆಯಲ್ಲಿ ನೆನೆಸಿದ ಪೊಲೀಸ್ ಅಧಿಕಾರಿಯ ಅಮಾನವೀಯ ನಡವಳಿಕೆಯನ್ನೂ ಗಮನಿಸಬೇಕು. ಅಧಿಕಾರಿಯ ಹಟದಿಂದಾಗಿ, ವಾಹನ ಸವಾರ ಎಟಿಎಂನಿಂದ ಹಣ ತರುವವರೆಗೂ, ಆತನ ಹೆಂಡತಿ ಹಾಗೂ ಹಸುಗೂಸು ಮಳೆಯಲ್ಲಿ ನೆನೆಯುತ್ತಾ ಬೀದಿಯಲ್ಲಿ ನಿಲ್ಲುವಂತಾಗಿದೆ. ಕಾನೂನುಪಾಲನೆ ನೆಪದಲ್ಲಿ ಜನಸಾಮಾನ್ಯರ ಜೀವದೊಂದಿಗೆ ಆಟವಾಡುವ ಅಧಿಕಾರ ಯಾರಿಗೂ ಇಲ್ಲ. ವಾಹನದ ಸಂಖ್ಯೆಯನ್ನು ನಮೂದಿಸಿಕೊಂಡು ಪ್ರಕರಣ ದಾಖಲಿಸುವ ಅವಕಾಶವಿದ್ದರೂ, ನಗದು ರೂಪದಲ್ಲೇ ದಂಡ ಪಾವತಿಸಬೇಕೆಂದು ಸತಾಯಿಸಿರುವ ಅಧಿಕಾರಿ ಮಾಡಿರುವುದು ಕೂಡ ಕಾನೂನು ಉಲ್ಲಂಘನೆಯನ್ನೇ.

ಜನಪ್ರತಿನಿಧಿಗಳು ಹಾಗೂ ಸರ್ಕಾರಿ ಅಧಿಕಾರಿಗಳು ಇರುವುದು ಜನರ ಸೇವೆಗೇ ಹೊರತು, ದಬ್ಬಾಳಿಕೆ ನಡೆಸಲಲ್ಲ. ತಮಗೆ ದೊರೆತಿರುವುದು ಸೇವೆಯ ಅವಕಾಶವೇ ಹೊರತು, ಅಧಿಕಾರ ಚಲಾವಣೆಯ ನಿರಂಕುಶತೆಯಲ್ಲ ಎನ್ನುವುದನ್ನು ಶಾಸಕಾಂಗ ಹಾಗೂ ಕಾರ್ಯಾಂಗದ ಪ್ರತಿನಿಧಿಗಳು ಮತ್ತೆ ಮತ್ತೆ ಮರೆಯುತ್ತಿದ್ದಾರೆ. ಅಸಹಾಯಕ ಹೆಣ್ಣುಮಗಳಿಗೆ ಸಾರ್ವಜನಿಕವಾಗಿ ಕಪಾಳಮೋಕ್ಷ ಮಾಡಲಾಗುತ್ತದೆ. ಕಷ್ಟ ಹೇಳಿಕೊಳ್ಳಲು ಬಂದವರನ್ನು ಭಿಕ್ಷುಕರಂತೆ ಕಡೆಗಣ್ಣಿನಿಂದ ನೋಡಲಾಗುತ್ತದೆ, ಕೊಳಕು ನಾಲಿಗೆ ಹರಿಬಿಡಲಾಗುತ್ತದೆ. ಅಸಹಾಯಕರ ಮೇಲೆ ಪೊಲೀಸರನ್ನು ಛೂ ಬಿಡಲಾಗುತ್ತದೆ. ಮಹಿಳೆಯರ ಬಗ್ಗೆ ಲಘುವಾಗಿ ಮಾತನಾಡಲಾಗುತ್ತದೆ. ಇಂಥ ಘಟನೆಗಳ ನಂತರವೂ ರಾಮರಾಜ್ಯದ ಬಗ್ಗೆ ಮಾತನಾಡುವ ಪ್ರಹಸನ ನಡೆಯುತ್ತದೆ. ಕನಿಷ್ಠ ಲಜ್ಜೆಯನ್ನೂ ಕಳೆದುಕೊಂಡಂತೆ ವರ್ತಿಸುವ ಅಧಿಕಾರಿಗಳು ಮತ್ತು ರಾಜಕಾರಣಿಗಳು ತಾವು ತಿನ್ನುತ್ತಿರುವ ಅನ್ನ ಹಾಗೂ ಅನುಭವಿಸುತ್ತಿರುವ ಸವಲತ್ತುಗಳ ಹಿಂದೆ ಜನಸಾಮಾನ್ಯರ ತೆರಿಗೆಯ ಹಣವಿರುವುದನ್ನು ಮರೆಯಬಾರದು.

**■ ರಘುನಾಥ ಚ.ಹ.**